# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 32/2020 ಪಿ.ಡಬ್ಲ್ಯೂಃ 7

ಸಿಡಬ್ಲೂಃ 16

ಸಾಕ್ಷಿದಾರರ ಹೆಸರು : ಕೃಷ್ಣಾನಂದ

ತಂದೆಯ ಹೆಸರು : ಮಾಧು ನಾಯ್ಕ

ವಯಸ್ಸು : 63 ವರ್ಷ

ಉದ್ಯೋಗ : ನಿವೃತ್ತ ಎ ಎಸ್ ಐ ,

ವಾಸ್ತವ್ಯ : ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 05-04-2024

## ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

ನಾನು 2017 ರಿಂದ 2020 ರ ವರೆಗೆ ಎಎಸ್ಐ ಆಗಿ ಚಿತ್ತಾಕುಲಾ ಪೋಲೀಸ ಠಾಣೆಯಲ್ಲಿ ಕೆಲಸ ನಿರ್ವಹಿಸಿದ್ದೇನೆ.

2. ದಿನಾಂಕಃ 03.02.2019 ರಂದು ನಾನು ಠಾಣೆಯ ಎಸ್ ಎಚ ಓ ಕರ್ತವ್ಯದಲ್ಲಿದ್ದಾಗ ಚಾಸಾ.1 ರವರು ರಾತ್ರಿ 8.30 ಗಂಟೆಗೆ ಠಾಣೆಗೆ ಹಾಜರಾಗಿ ಹೇಳಿಕೆಯ ದೂರನ್ನು ನೀಡಿದ್ದು , ಸದರಿ ದೂರಿನ ಆಧಾರದ ಮೇರೆಗೆ ಠಾಣಾ ಗುನ್ನಾ ಸಂಖ್ಯೆ 11/2019 ರಲ್ಲಿ ಕಲಂ 279, 304 ಎ ಐಪಿಸಿ ಪ್ರಕಾರ ಪ್ರ ವ ವರದಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡೆನು. ಈಗ ನ್ಯಾಯಾಲಯದ ಮುಂದಿರುವ ನಿಪಿ.1 ನ್ನು ನೋಡಿ ಗುರುತಿಸುತ್ತೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಪ್ರ ವ ವರದಿಯನ್ನು ನೋಡುತ್ತಿದ್ದು, ಗುರುತಿಸುತ್ತೇನೆ. ಅದನ್ನು ನಿಪಿ.12 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ.12 ಎ ಎಂದು ಗುರುತಿಸಲಾಯಿತು.

3. ನಂತರ ಚಾಸಾ.17 ರವರ ಆದೇಶದ ಮೇರೆಗೆ ಜಿಲ್ಲಾ ಆಸ್ಪತ್ರೆಗೆ ತೆರಳಿ ಮೃತ ರವಿ ಲಮಾಣಿ ಇವರ ಶವ ತನಿಖಾ ವರದಿಯನ್ನು ಪೂರೈಸಿದೆನು. ಸದರಿ ಸಮಯಕ್ಕೆ ಛಾಯಾಚಿತ್ರಗಳನ್ನು ತೆಗೆಯಲಾಯಿತು. ಈಗ ನ್ಯಾಯಾಲಯದ ಮುಂದಿರುವ ನಿಪಿ.8 ನ್ನು ನೋಡಿ ಗುರುತಿಸುತ್ತೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಪಿ.8 ಎ ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ನಿಪಿ.7 ನ್ನು ನೋಡಿ ಗುರುತಿಸುತ್ತೇನೆ. ಶವತನಿಖಾ ವರದಿ ತಯಾರಿಸಿದ ನಂತರ ಮೃತದೇಹವನ್ನು ಅವರ ಸಂಬಂಧಿಕರಿಗೆ

ಹಸ್ತಾಂತರಿಸಲಾಯಿತು. ಚಾಸಾ.6, 8 ಮತ್ತು 9 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.17 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಸಿ ಡಿ ಎನ್ ವಕೀಲರಿಂದಃ**

4. ನಾನು ನನ್ನ ತನಿಖಾ ಕಾಲದಲ್ಲಿ ಘಟನಾ ಸ್ಥಳಕ್ಕೆ ಹೋಗಿದ್ದೀರಾ ಎಂದರೆ ಹೋಗಿದ್ದೇನೆ ಎಂದು ನುಡಿಯುತ್ತಾರೆ. 2019 ನೇ ಇಸವಿಯಲ್ಲಿ ಮಾವಿನಹೊಳೆ ಬ್ರಿಡ್ಜ ಕೆಲಸ ನಡೆಯುತ್ತಿದ್ದರಿಂದ ಕಾರವಾರದಿಂದ ಗೋವಾಕ್ಕೆ ಹೋಗುವ ಮತ್ತು ಗೋವಾದಿಂದ ಕಾರವಾರಕ್ಕೆ ಹೋಗುವ ವಾಹನಗಳನ್ನು ಒಂದೇ ರಸ್ತೆಯಲ್ಲಿ ಬಿಡುತ್ತಿದ್ದರು ಎಂದರೆ ಆ ಬಗ್ಗೆ ನಾನು ಗಮನಿಸಿರುವುದಿಲ್ಲಾ. ಅಪಘಾತವಾದ ದಿನದಂದೇ ನಾನು ಘಟನಾ ಸ್ಥಳಕ್ಕೆ ಹೋಗಿದ್ದೇನೆ. ಅಪಘಾತವಾದ ದಿನದಂದು ವಾಹನಗಳನ್ನು ತಡೆಯಲು ಬ್ಯಾರಿಕೇಡ ಹಾಕಿದ್ದೀರಾ ಎಂದರೆ ಇಲ್ಲಾ ಎಂದು ನುಡಿಯುತ್ತಾರೆ. ಅಪಘಾತವಾಗಿದೆ ಎಂದು ಹೇಳಿದ ಸ್ಥಳದಲ್ಲಿ ವಾಹನ ಸಂಚಾರ ಇತ್ತು ಎಂದರೆ ಸರಿ. ಘಟನಾ ಸ್ಥಳದಲ್ಲಿ ವಾಹನಕ್ಕೆ ಬ್ರೇಕ್ ಹಾಕಿದ ಗುರುತು ಮತ್ತು ಅಪಘಾತವಾದ ಬಗ್ಗೆ ಕುರುಹುಗಳು ವಾಹನ ಸಂಚಾರ ಇದ್ದಿದ್ದರಿಂದ ಅಳಿಸಿಹೋಗಿರುತ್ತವೆ ಎಂದರೆ ಕಚ್ಚಾ ರಸ್ತೆ ಆಗಿದ್ದರಿಂದ ಗುರುತುಗಳು ಇರಲಿಲ್ಲಾ ಎಂದು ನುಡಿಯುತ್ತಾರೆ. ಚಾಸಾ.1 ರವರು ನೀಡಿದ ಸುಳ್ಳು ದೂರಿಗೆ ನಾನು ಪ್ರ ವ ವರದಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**